# FEBRUARY 23, 2026
# AKASHAVANI - DHARWAD
# PRADESH SAAMACHARA (KANNADA) 07.05 A.M

**ಮುಖ್ಯಾಂಶಗಳು**

- **ರಾಷ್ಟ್ರಪತಿ ಭವನದಲ್ಲಿ ಇಂದು ರಾಜಾಜಿ ಉತ್ಸವ: ಕೇಂದ್ರ ಪ್ರಾಂಗಣದಲ್ಲಿ ಸಿ.ರಾಜಗೋಪಾಲಾಚಾರಿ ಪ್ರತಿಮೆ ಅನಾವರಣ.**
- **ಡಿಜಿಟಲ್ ಅರೆಸ್ಟ್ ಹಾಗೂ ವಂಚನೆ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವಂತೆ ಪ್ರಧಾನಮಂತ್ರಿ ಮನವಿ.**
- **ಲೋಕಭವನದಲ್ಲಿ ರಾಜ್ಯಗಳ ಸಂಸ್ಥಾಪನಾ ದಿನಾಚರಣೆ: "ಏಕ್ ಭಾರತ್, ಶ್ರೇಷ್ಠ ಭಾರತ್ ಸಂಕಲ್ಪಕ್ಕೆ ರಾಜ್ಯಪಾಲರ ಕರೆ.**
- **ದೇಶದ ಅತಿ ದೊಡ್ಡ ರೇಷ್ಮೆ ಸಂಗ್ರಹಾಲಯ ಮೈಸೂರಿನಲ್ಲಿ ಸ್ಥಾಪನೆ.**

<><><>

**ಈಗ ವಾರ್ತೆಗಳ ವಿವರ**

<><><>

**ಇಂದು ರಾಷ್ಟ್ರಪತಿ ಭವನದಲ್ಲಿ ರಾಜಾಜಿ** ಉತ್ಸವವನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ರಾಷ್ಟ್ರಪತಿ ಭವನದ ಕೇಂದ್ರ ಪ್ರಾಂಗಣದಲ್ಲಿ ಸಿ.ರಾಜಗೋಪಾಲಾಚಾರಿ ಅವರ ಪ್ರತಿಮೆಯನ್ನು ಅನಾವರಣಗೊಳಿಸಲಾಗುವುದು. ಆಕಾಶವಾಣಿಯ ಜನಪ್ರಿಯ, ಮನ್ ಕಿ ಬಾತ್ ಕಾರ್ಯಕ್ರಮದ, 131 ನೇ ಆವೃತ್ತಿಯಲ್ಲಿ ಈ ವಿಷಯ ಪ್ರಸ್ತಾಪಿಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ನಮ್ಮ ದೇಶವು ಗುಲಾಮಗಿರಿಯನ್ನು ಮೆಟ್ಟಿ, ಭಾರತದ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದೆ. ಸ್ವತಂತ್ರ ಭಾರತದ ಮೊದಲ ಭಾರತೀಯ ಗವರ್ನರ್ ಜನರಲ್ ಸಿ.ರಾಜಗೋಪಾಲಾಚಾರಿ ಅವರು ಅಧಿಕಾರವನ್ನು ಒಂದು ಪದವಿಯಂತೆ ನೋಡದೆ ಸೇವೆಯಂತೆ ಭಾವಿಸಿದ ಮಹನೀಯರು ಎಂದು ಬಣ್ಣಿಸಿದ್ದಾರೆ.

**ಧ್ವನಿ- ಪ್ರಧಾನಿ ( 65 ಸೆಕೆಂದುಗಳು)**

ದೇಶದಲ್ಲಿ ಡಿಜಿಟಲ್ ಅರೆಸ್ಟ್ ಹಾಗೂ ಡಿಜಿಟಲ್ ವಂಚನೆಗಳ ಬಗ್ಗೆ ಸಮಾಜದಲ್ಲಿ ಸಾಕಷ್ಟು ಜಾಗೃತಿ ಮೂಡುತ್ತಿದೆ. ಆದರೆ ಇಂದಿಗೂ ನಮ್ಮ ಸುತ್ತಮುತ್ತ ಅಕ್ಷಮ್ಯವಾದ ಘಟನೆಗಳು ನಡೆಯುತ್ತಲೇ ಇವೆ. ಜನರು ಸದಾ ಜಾಗರೂಕರಾಗಿಯೂ ಮತ್ತು ಎಚ್ಚರದಿಂದಿರುವುದು ಅತ್ಯಂತ ಅವಶ್ಯಕವಾಗಿದೆ ಎಂದರು.

**ಧ್ವನಿ- ಪ್ರಧಾನಿ ( 38 ಸೆಕೆಂದುಗಳು)**

ನಮ ಬ್ಯಾಂಕ ಖಾತೆ ಸುರಕ್ಷಿತವಾಗಿರುವುದನು ಖಚಿತಪಡಿಸಿಕೊಳ್ಳಲು, ಬ್ಯಾಂಕಗಳು ನಿಯತಕಾಲಿಕವಾಗಿ ಮರು ಕೆ.ವೈ.ಸಿ ಯನ್ನು ನಿರ್ವಹಿಸುತ್ತವೆ. ಈ ಕುರಿತು ಸಂದೇಶ ಬಂದಲ್ಲಿ, ಅಧಿಕೃತ ಮಾಧ್ಯಮದ ಮೂಲಕ ಮಾಹಿತಿ ನೀಡಬೇಕು ಎಂದು ತಿಳಿಸಿದರು.

**ಧ್ವನಿ- ಪ್ರಧಾನಿ ( 65 ಸೆಕೆಂದುಗಳು)**

<><><>

ಈಗ ಪ್ರಕಟಣೆ.

ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

<><><>

( 42 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ.

<><><>

**ಬೆಂಗಳೂರಿನ ಲೋಕಭವನದಲ್ಲಿ ಮಣಿಪುರ, ಮೇಘಾಲಯ,** ತ್ರಿಪುರ, ಉತ್ತರ ಪ್ರದೇಶ, ಮಿಜೋರಾಂ, ಅರುಣಾಚಲ್ ಪ್ರದೇಶ ರಾಜ್ಯಗಳ ದಾದ್ರಾ ನಗರ್ ಹವೇಲಿ ಜಿಲ್ಲೆ, ದಮನ್ ಮತ್ತು ದಿಯು ಕೇಂದ್ರಾಡಳಿತ ಪ್ರದೇಶಗಳ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ನಮ್ಮ ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ಥಾಪನೆಯು ಭಾರತದ ಒಕ್ಕೂಟ ರಚನೆ ಮತ್ತು ಪ್ರಜಾಪ್ರಭುತ್ವದ ಮನೋಭಾವದ ಬಲವನ್ನು ಪ್ರತಿಬಿಂಬಿಸುತ್ತದೆ. ಪ್ರತಿಯೊಂದು ರಾಜ್ಯವು ತನ್ನದೇ ಆದ ವಿಶಿಷ್ಟ ಭಾಷೆ, ಸಂಸ್ಕೃತಿ, ಸಂಪ್ರದಾಯ ಮತ್ತು ಜೀವನ ವಿಧಾನವನ್ನು ಹೊಂದಿದ್ದು, 'ಏಕ್ ಭಾರತ, ಶ್ರೇಷ್ಠ ಭಾರತ' ಎಂಬ ಮನೋಭಾವವನ್ನು ಸಾಕಾರಗೊಳಿಸುತ್ತದೆ ಎಂದರು. ನಾವೆಲ್ಲರೂ ಪ್ರಾದೇಶಿಕ ವೈವಿಧ್ಯತೆಗಳನ್ನು ಗೌರವಿಸುತ್ತಾ ರಾಷ್ಟ್ರೀಯ ಏಕತೆಯನ್ನು ಮತ್ತಷ್ಟು ಬಲಪಡಿಸಲು ಸಂಕಲ್ಪ ಮಾಡೋಣ. ಅಭಿವೃದ್ಧಿ, ಉತ್ತಮ ಆಡಳಿತ, ಶಿಕ್ಷಣ, ಕೌಶಲ್ಯ ಮತ್ತು ಸಾಮಾಜಿಕ ಸಾಮರಸ್ಯದ ಮೂಲಕ, ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪ್ರಗತಿಯತ್ತ ಕೊಂಡೊಯ್ಯೋಣ ಎಂದರು.

<><><>

**ಕೇಂದ್ರ ರೇಷ್ಮೆ ಮಂಡಳಿ, ರಾಜ್ಯದ ಸಾಂಸ್ಕೃತಿಕ ನಗರಿ,** ಮೈಸೂರಿನಲ್ಲಿ ದೇಶದಲ್ಲಿ ಅತಿ ದೊಡ್ಡ ವಿಶಿಷ್ಟ ರೇಷ್ಮೆ ಸಂಗ್ರಹಾಲಯ ನಿರ್ಮಿಸಲಿದೆ. ರಾಜ್ಯದ ರೇಷ್ಮೆ ಬಟ್ಟೆ ತಯಾರಿಕೆಯ ಸುದೀರ್ಘ ಇತಿಹಾಸ, ರೇಷ್ಮೇ ಸೀರೆಗಳ ವೈಶಿಷ್ಟ್ಯತೆ ಹಾಗೂ ಪರಂಪರೆಯ ಬಗ್ಗೆ ಸಂಗ್ರಹಾಲಯ ಬೆಳಕು ಚೆಲ್ಲಲಿದೆ. ಈ ಕುರಿತು ಒಂದು ವರದಿ.

**ಕರ್ನಾಟಕ ರಾಜ್ಯವು ದೇಶದ ರೇಷ್ಮೇ ಉತ್ಪಾದನೆಯಲ್ಲಿ ಶೇಕಡ 32 ರಷ್ಟು ಕೊಡುಗೆ ನೀಡುತ್ತಿದ್ದು, ರಾಜ್ಯದ 11 ಸಾವಿರದ 526 ಗ್ರಾಮಗಳ ರೈತರು ರೇಷ್ಮೆ ಕೃಷಿಯಲ್ಲಿ ತೊಡಗಿದ್ದಾರೆ. ವಿಶ್ವ ಪ್ರಶಿದ್ಧ ರೇಷ್ಮೆ ಸೀರೆಗಳಿಗೆ ಹೆಸರು ವಾಸಿಯಾಗಿರುವ ಮೈಸೂರಿನಲ್ಲಿ, ದೇಶದ ಮೊಟ್ಟ ಮೊದಲ ರೇಷ್ಮೆ ವಸ್ತು ಸಂಗ್ರಹಾಲಯ ನಿರ್ಮಾಣವಾಗಲಿದೆ. 75 ವರ್ಷಗಳ ಹಿಂದೆ ರಾಜ್ಯದಲ್ಲಿ ರೇಷ್ಮೆಗೆ ಹೆಚ್ಚಿನ ಉತ್ತೇಜನ ನೀಡಲು, ಮೈಸೂರಿನಲ್ಲಿ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಗಿತ್ತು. ಸಂಸ್ಥೆಗೆ 75 ವರ್ಷಗಳು ತುಂಬಿದ ಹಿನ್ನೆಲೆ, ಕೇಂದ್ರ ಸರ್ಕಾರ ವಸ್ತು ಸಂಗ್ರಹಾಲಯ ಆರಂಭಿಸಲು ಈಗಾಗಲೇ ಅನುಮತಿ** ನೀಡಿದೆ. ರೇಷ್ಮೆ ಸಂಸ್ಥೆ **ಆವರಣದ ಸುಮಾರು 2 ರಿಂದ 5 ಎಕರೆ ವಿಸ್ತೀರ್ಣದಲ್ಲಿ ಸುಸಜ್ಜಿತ ಮ್ಯೂಸಿಯಂ ನಿರ್ಮಾಣವಾಗಲಿದೆ. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಜೊತೆಯಲ್ಲಿ, ನೂತನ ರೇಷ್ಮೆ ಮ್ಯೂಸಿಯಂ ದೇಶದಲ್ಲಿ ರೇಷ್ಮೆ ಉದ್ಯಮ ನಡೆದು ಬಂದ ಹಾದಿ, ರೇಷ್ಮೆ ಸೀರೆ ತಯಾರಿ ಕ್ರಮಗಳ ಕುರಿತು ಮಾಹಿತಿ ನೀಡಲಿದೆ. ಮೈಸೂರಿನ ನೂತನ ರೇಷ್ಮೆ ಮ್ಯೂಸಿಯಂ ನಿರ್ಮಾಣ ಯೋಜನೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕೇಂದ್ರ ರೇಷ್ಮೆ ಮಂಡಳಿ ತಾಂತ್ರಿಕ ವಿಭಾಗದ ಜಂಟಿ ಕಾರ್ಯದರ್ಶಿ ಡಾಕ್ಟರ ನರೇಶ್ ಬಾಬು..**

<><><>

ಧ್ವನಿ– ವಿವೇಕ ಹಾಗೂ ಡಾಕ್ಟರ ನರೇಶ್ ಬಾಬು

<><><>